ಬಹುವಾಗಿ ಹಿಡಿಸಿತ್ತು. ವಿಜ್ಞಾನಿಗಳಿಂದ ಬೆಂಬಲ ಪಡೆಯದ ಈ ತತ್ತ್ವದ ಪ್ರಕಾರ, ಇಡೀ ವಿಶ್ವದ ಸೃಷ್ಟಿ ಮತ್ತು ವಿಶ್ವಶಕ್ತಿಯು ಮಂಜಿನಿಂದಲೆ ಪ್ರಾರಂಭವಾಗಿರಬೇಕು ಎಂದು ನಂಬಲಾಗಿತ್ತು. **Hanns HÖrbiger** ಎಂಬಾತ 1913ರಲ್ಲಿ ಪ್ರತಿಪಾದಿಸಿದ್ದ **Welteislehre** ಎಂಬ ಈ ವಾದವು ಹಲವು ನಾಜಿಗಳ ಚಿಂತನೆಯಲ್ಲಿ ಆಳವಾಗಿ ಬೇರೂರಿತ್ತು. ಅಡಾಲ್ಫ್ ಹಿಟ್ಲರ್ ಮತ್ತು ಹಿಮ್ಲರ್ ಕೂಡ ಇದರಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಹಾಗಾಗಿ ಹಿಮ್ಲರ್‌ನ ವಿಚಾರಕೂಟವು ತಮ್ಮ ಪವಿತ್ರವಂಶದ ಮೂಲ ಆರ್ಯರು ಬಹುಶಃ ಮಂಜಿನಿಂದಾವೃತವಾದ ಟಿಬೆಟ್ ಪ್ರದೇಶದಲ್ಲಿ ಇತರರಿಂದ ಬೇರೆಯಾಗಿಯೇ ಉಳಿದು ಶುದ್ಧತೆಯನ್ನು ಉಳಿಸಿಕೊಂಡು ಇನ್ನೂ ಅಸ್ತಿತ್ವದಲ್ಲಿರಲು ಸಾಧ್ಯ ಎಂದು ನಂಬಿರುತ್ತಾರೆ. ಹಾಗೆಂದೆ ಆ ಸಿದ್ಧಾಂತದಲ್ಲಿ ಅಪಾರ ನಂಬಿಕೆ ಇಟ್ಟಿದ್ದ **Edmund Kiss** ಎಂಬ ಒಬ್ಬ ವಿಜ್ಞಾನಿಯನ್ನೂ ಈ ಅಧ್ಯಯನ ತಂಡದೊಂದಿಗೆ ಕರೆದೊಯ್ಯಬೇಕೆಂದು ಹಿಮ್ಲರ್ ಶರತ್ತು ಒಡ್ಡುತ್ತಾನೆ. ಸ್ಕಾಫರ್ ಆ ಶರತ್ತಿಗೆ ಅಸಮಾಧಾನದಿಂದಲೆ ಒಪ್ಪುತ್ತಾನೆ. ಜೊತೆಗೆ, ಒಬ್ಬ ಕೀಟಶಾಸ್ತ್ರಜ್ಞನಾದ ಕ್ರಾಸ್, ಮಾನವಶಾಸ್ತ್ರಜ್ಞನಾದ ಬ್ರುನೋ ಬೆಗರ್ ಮುಂತಾದವರನ್ನು ತನ್ನೊಂದಿಗೆ ಕರೆದೊಯ್ಯುತ್ತಾನೆ.



ಟಿಬೆಟ್‌ನ ರಾಜನೊಂದಿಗೆ ಬ್ರುನೋ ಬೆಗರ್

★★★

ಅಂತೂ ಆರು ಜನರ ತಂಡ ಟಿಬೆಟಿಗೆ ಹೊರಡುತ್ತದೆ. ಇವರಲ್ಲಿ ಹಿಮ್ಲರ್‌ಗೆ ಬ್ರುನೋ ಬೆಗರ್‌ಗೆ ಹಚ್ಚಿದ ರಹಸ್ಯ ಕಾರ್ಯಾಚರಣೆಯೂ ಬಹಳ ಮುಖ್ಯವಾಗಿರುತ್ತದೆ. ಹಾಗಾಗಿ ಬೆಗರ್ ಸಿಕ್ಕಿಂನಿಂದಲೆ ತನ್ನ ಮಾನವ ಅಧ್ಯಯನವನ್ನು ಪ್ರಾರಂಭಿಸುತ್ತಾನೆ. ಆತ ಆಯ್ಕೆ ಮಾಡಿಕೊಂಡ ಮಾನವರನ್ನು ಅಧ್ಯಯನ ಮಾಡುತ್ತಿದ್ದ ಕ್ರಮವೇ ವಿಚಿತ್ರವಾಗಿತ್ತು. ಅದರಿಂದಲೆ ನನ್ನ ಜೀವನ ಬದಲಾಗಿದ್ದು! ಮೊದಲಿಗೆ ವ್ಯಕ್ತಿಯ ಮುಖದಲ್ಲಿ ಹತ್ತಾರು ಅಳತೆಗಳನ್ನು ಮಾಡಿ, ಆನಂತರ ಶರೀರದ ಅಳತೆಗಳನ್ನು ತೆಗೆದು, ಕೆಲವರ ಮುಖದ ಎರಕ ಅಥವಾ ಅಚ್ಚನ್ನೂ ತೆಗೆಯುತ್ತಿದ್ದರು— ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ. ಹಾಗೆ ಅಚ್ಚು ತೆಗೆಯಲು ಕೆಲವೊಮ್ಮೆ ಹಲವು ಗಂಟೆಗಳು ಬೇಕಿತ್ತು. ಅಷ್ಟೂ ಹೊತ್ತು ಆ ವ್ಯಕ್ತಿ ಅಲುಗಾಡದೆ ಸ್ಥಿರವಾಗಿ ಮಲಗಿರಬೇಕು. ಮೊದ ಮೊದಲಿಗೆ ಬೆಗರ್ ಆರಿಸಿಕೊಂಡ ಕೆಲವರಂತೂ ಮುಖದ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಕುತ್ತಿದ್ದಂತೆ, ತಮ್ಮನ್ನು ಏನೋ ಹಿಡಿದುಕೊಂಡುಬಿಟ್ಟಿದೆ ಎಂದು ಹೆದರಿ ಓಡಿಹೋದದ್ದೂ ಇದೆ. ಆದರೆ ಬರಬರುತ್ತ ಈ ತಂಡ ತಮ್ಮ ತಂತ್ರ–ಕುತಂತ್ರಗಳಿಂದ ಎಲ್ಲವನ್ನೂ ಎಲ್ಲರನ್ನೂ ಗೆಲ್ಲುತ್ತಾರೆ! ಉದಾಹರಣೆಗೆ ಬೆಗರ್ ತನ್ನ ಮಾದರಿ ವ್ಯಕ್ತಿಗಳಿಗೆ ಹಾಗೂ ಇತರರಿಗೆ ಆರೋಗ್ಯ ತಪಾಸಣೆ ಮಾಡುವುದರ ಜೊತೆಗೆ ವೈದ್ಯಕೀಯ ಶುಶ್ರೂಷೆ